ಅನುಮೋದನೆಯಾಗಿರುತ್ತದೆ. ಅಮ್ಮಿನಬಾವಿಯಿಂದ ನೃಪತುಂಗ ಬೆಟ್ಟದಲ್ಲಿನ ಜಲಸಂಗ್ರಹಾಲಯದವರೆಗೆ 1168 ಎಂ.ಎಂ. ವ್ಯಾಸದ ಹೊಸಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

3. ಹುಬ್ಬಳ್ಳಿ ನಗರಕ್ಕೆ ನೀರು ವಿತರಣಾ ವ್ಯವಸ್ಥೆಯ ಅಭಿವೃದ್ಧಿಗಾಗಿ ರೂ. 422.00 ಲಕ್ಷಗಳಿಗೆ ಹಾಗೂ ಧಾರವಾಡ ನಗರದ ನೀರು ವಿತರಣಾ ವ್ಯವಸ್ಥೆಯ ಅಭಿವೃದ್ಧಿಗಾಗಿ ರೂ. 178.00 ಲಕ್ಷಗಳ ಅಂದಾಜು ಪತ್ರಿಕೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಸದ್ಯದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

4. ಹುಬ್ಬಳ್ಳಿ–ಧಾರವಾಡ ಅವಳಿನಗರದ ವಿತರಣಾ ಜಾಲದಲ್ಲಿನ ಮತ್ತು ಒಳಚರಂಡಿ ಮಾರ್ಗಗಳ ವಿನ್ಯಾಸ ಮತ್ತು ಅಂದಾಜಿನ ಮಾಸ್ಟರ್ ಪ್ಲಾನ್ ತಯಾರಿಸಲು ರೂ. 40.00 ಲಕ್ಷ ವೆಚ್ಚದಲ್ಲಿ ಜಿ.ಐ.ಎಸ್. ಮತ್ತು ಜಿ.ಪಿ.ಎಸ್. ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

5. ಜಲ ಮಂಡಲಿಯು ಅವಳಿನಗರದ ನೀರು ಸರಬರಾಜು ನಿರ್ವಹಣೆಯನ್ನು 1.04.2003ರಿಂದ ನಿರ್ವಹಿಸುತ್ತಿದ್ದು ವಿತರಣಾ ಜಾಲದ ತ್ವರಿತ ಅಭಿವೃದ್ಧಿಗಾಗಿ ರೂ. 21.50 ಲಕ್ಷ ಮತ್ತು ರೂ. 39.10 ಲಕ್ಷ ಅಂದಾಜು ವೆಚ್ಚದಲ್ಲಿ ಬರಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

...

321 (526) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ರಸ್ತೆಗಳು ತುಂಬ ಹದಗೆಟ್ಟಿರುವುದರಿಂದ ಸುಗಮ ಸಂಚಾರಕ್ಕೆ ಮತ್ತು ಪರಿಸರಕ್ಕೆ ತುಂಬ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು

ಆ) ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಸಮಗ್ರ ಅಭಿವೃದ್ಧಿಗಾಗಿ 47.99 ಕೋಟಿ ರೂ.ಗಳ ಯೋಜನೆಯನ್ನು ತಯಾರಿಸಿದ್ದು, ಇದಕ್ಕೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

...

322 (396) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಸಗಿ ಟಿ.ವಿ. ಚಾನಲ್‌ಗಳಲ್ಲಿ ಪ್ರತಿದಿನ ಬಿತ್ತರವಾಗುತ್ತಿರುವ ಕ್ರೈ ಸ್ಟೋರಿ, ಕ್ರೈಂ ಡೈರಿ ಧಾರವಾಹಿಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಧಾರವಾಹಿಗಳನ್ನು ಪ್ರಸಾರ ಮಾಡುವುದನ್ನು ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?